**ದಿನಾಂಕಃ 03.03.2026 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಜಿ.ಜಿ.ಜಿ. ವಕೀಲರಿಂದಃ–**

1. ನಿಡಿ–15 ನ್ನು ಬರೆಸಲು ಛಾಪಾ ಕಾಗದವನ್ನು 1 ನೇ ಪ್ರತಿವಾದಿ ತಂದಿರುತ್ತಾರೆ. ರೂ.100/– ಗಳಿಗೆ ಬೆಂಗಳೂರಿನಲ್ಲಿ ಪಾಲುವಿಭಾಗ ಮಾಡಿಕೊಳ್ಳಲು ತಂದಿರುತ್ತಾರೆ. ಸದರಿ ಕಾಗದವು ಎಷ್ಟು ಪುಟಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಸದರಿ ಕಾಗದದಲ್ಲಿ ಯಾರ ಹೆಸರನ್ನು ಮುದ್ರಣ ಮಾಡಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಕಾಗದದಲ್ಲಿ 2 ನೇ ಪಾರ್ಟಿಯಾಗಿ ನನ್ನ ಮತ್ತು ನನ್ನ ತಮ್ಮಂದಿರ ಹೆಸರು ನಮೂದಾಗಿರುವುದಿಲ್ಲ. ಯಾವುದೇ ಛಾಪಾಕಾಗದ ತೆಗೆದುಕೊಳ್ಳುವಾಗ ಯಾವ ಉದ್ದೇಶಕ್ಕಾಗಿ ತೆಗೆದುಕೊಳ್ಳಲಾಗುತ್ತದೆ ಎಂದು ನಮೂದಿಸಲಾಗುತ್ತದೆ ಎಂದರೆ ಸರಿ.

2. 1 ನೇ ಪ್ರತಿವಾದಿಗೆ ಬೆಂಗಳೂರಿನಲ್ಲಿ ಒಂದೇ ಮನೆ ಇರುತ್ತದೆ. 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಮನೆ ಕಟ್ಟಿಸಿ ಸುಮಾರು 35–40 ವರ್ಷಗಳಾಗಿರುತ್ತವೆ. ಸದರಿ ಕಾಗದವನ್ನು 1 ನೇ ಪ್ರತಿವಾದಿ ಬಾಡಿಗೆ ಕರಾರು ಮಾಡಿಕೊಳ್ಳಲು ತಂದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವ ದಿನದಂದು ಛಾಪಾಕಾಗದವನ್ನು ತಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕಃ01.11.2015 ರಂದು 2 ನೇ ಪ್ರತಿವಾದಿಯ ಮನೆಯಲ್ಲಿ ಪಾಲುವಿಭಾಗ ಪತ್ರವನ್ನು ಮಾಡಿಕೊಂಡಿರುತ್ತೇವೆ. ಆ ಸಮಯದಲ್ಲಿ ನಮ್ಮ ಊರಿನಿಂದ ಸಾಯಿನಾಥ, ಬಳೆಗುಂಡಪ್ಪ, ಶಿವಣ್ಣ ಎಂಬುವವರನ್ನು ಕರೆದುಕೊಂಡು ಹೋಗಿದ್ದೆ.

3. ಪಾಲುವಿಭಾಗ ಮಾಡುವ ಸಮಯದಲ್ಲಿ 1, 2 ಮತ್ತು 4 ನೇ ಪ್ರತಿವಾದಿಯರು ಮತ್ತು ನಾನು ಹಾಜರಿದ್ದೆವು. ನಾನು 2 ನೇ ಪ್ರತಿವಾದಿಯ ಮನೆಗೆ ಮೊದಲೇ ಹೋಗಿದ್ದೆ ನಂತರ 1 ಮತ್ತು 4 ನೇ ಪ್ರತಿವಾದಿಗಳು ಅಲ್ಲಿಗೆ ಬಂದಿರುತ್ತಾರೆ. ನಾನು ಹೋದಾಗ ಸಮಯ 10–11 ಗಂಟೆಯಾಗಿತ್ತು. ನಾನು 2 ನೇ ಪ್ರತಿವಾದಿಯ ಮನೆಯಲ್ಲಿ ಸಂಜೆ 4.00 ಗಂಟೆವರೆಗೆ ಇದ್ದೆ. ನಿಡಿ–15 ರಲ್ಲಿ ಬರೆದಿರುವ

ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. ನಿಡಿ-15 ರಲ್ಲಿ ಸರ್ವೆ ನಂಬರ್‌:134 ನಮೂದು ಆಗಿರುವುದಿಲ್ಲ. ದಾವಾ ಸ್ವತ್ತು ಸರ್ವೆ ನಂಬರ್‌:134 ನ್ನು ವಾದಿಗೆ ಮಾರಾಟ ಮಾಡಿರುವುದರಿಂದ ಅದನ್ನು ನಿಪಿ-15 ರಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿಯು ನಿಡಿ-15 ರಲ್ಲಿ ಸರ್ವೆ ನಂಬರ್‌:132 ಎಂದು ತಪ್ಪಾಗಿ ನಮೂದಿಸಲಾಗಿದೆ ಎಂದು ಷರಾ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ನಿಡಿ-15 ರಲ್ಲಿ ಸರ್ವೆ ನಂಬರ್‌:134 ಎಂದು ತಿದ್ದುಪಡಿಯಾಗಿಲ್ಲ ಎಂದರೆ ಸರಿ.

4. ಸರ್ವೆ ನಂಬರ್‌:132/2 ರಲ್ಲಿ ಒಟ್ಟು 6 ಎಕರೆ 6 ಗುಂಟೆ ಜಮೀನಿನ ಪೈಕಿ ನನಗೆ 3 ಎಕರೆ 3 ಗುಂಟೆ ಜಮೀನು ಹಾಗೂ 2 ನೇ ಪ್ರತಿವಾದಿಗೆ 3 ಎಕರೆ 3 ಗುಂಟೆ ಜಮೀನು ಎಂದು ತೋರಿಸಲಾಗಿದೆ ಎಂದರೆ ಸರಿ. ಸರ್ವೆ ನಂಬರ್‌:134 ರಲ್ಲಿ ನನಗೆ ಭಾಗ ನನಗಾಗಲೀ ಅಥವಾ 2 ನೇ ಪ್ರತಿವಾದಿಗಾಗಲೀ ಭಾಗ ಬಂದ ಬಗ್ಗೆ ನಿಡಿ-15 ರಲ್ಲಿ ಬರೆದಿರುವುದಿಲ್ಲ ಎಂದರೆ ಸರಿ.

5. ಪಾಲುವಿಭಾಗ ಮಾಡಿಕೊಳ್ಳಲಾಗಿದೆ ಎಂದು ಹೇಳಲಾದ ದಿನ ನಿಡಿ-15 ನ್ನು ನೋಂದಣಿ ಮಾಡಿಸಲಿಲ್ಲ ಏಕೆಂದರೆ 4 ನೇ ಪ್ರತಿವಾದಿ ಬಂದಿರಲಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಒಟ್ಟು 7 ಜನ ಮಕ್ಕಳು. ನಿಡಿ-15 ರಲ್ಲಿ ಮೂರು ಜನ ಹೆಣ್ಣು ಮಕ್ಕಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಿಡಿ-15 ರಲ್ಲಿ ಹೆಣ್ಣು ಮಕ್ಕಳ ಸಮ್ಮತಿಯ ಬಗ್ಗೆಯೂ ಸಹ ನಮೂದಿಸಿರುವುದಿಲ್ಲ ಎಂದರೆ ಸರಿ. ನಿಡಿ-15 ನ್ನು ಮಾಡಿಕೊಳ್ಳಲು ನನ್ನ ಅಕ್ಕ-ತಂಗಿಯರ ಸಮ್ಮತಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅವರಿಗೆ ನಿಡಿ-15 ನ್ನು ನಾವು ಮಾಡಿಕೊಳ್ಳುವ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ.

6. ನಿಡಿ-15 ಕ್ಕೆ ಬಳೆಗುಂಡಪ್ಪ, ಶಿವಣ್ಣ ಮತ್ತು ಸಾಯಿನಾಥ್‌ರವರು ಸಾಕ್ಷಿಗಳಾಗಿ ಸಹಿ ಮಾಡಿರುತ್ತಾರೆ. ಸದರಿ ಮೂರು ಜನ ನಮ್ಮ ಕುಲಸ್ಥರು ಆಗಿದ್ದಾರೆ ಎಂದರೆ ಸರಿ. ನಿಡಿ-15 ನ್ನು ನಾನು ಮತ್ತು ಸಾಕ್ಷಿದಾರರು ಹಾಗೂ ಇತರ ಪ್ರತಿವಾದಿಗಳೊಂದಿಗೆ ಸೇರಿ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ನಿಡಿ–15 ರಲ್ಲಿ ಸರ್ವೆ ನಂಬರ್‌ಃ132/2 ರಲ್ಲಿ 1 ಮತ್ತು 4 ನೇ ಪ್ರತಿವಾದಿಗೆ ಯಾವುದೇ ಭಾಗ ನೀಡಿರುವುದಿಲ್ಲ ಎಂದರೆ ಸರಿ. ದಾವಾ ಸರ್ವೆ ನಂಬರ್‌ಃ134 ರಲ್ಲಿ ಕ್ರಯದ ಕರಾರನ್ನು ಬರೆದುಕೊಟ್ಟ ದಿನದಿಂದಲೇ ವಾದಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ನಾವೇ ಉಳಿಸಿಕೊಳ್ಳಬೇಕು ಎಂಬ ದುರುದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.